ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. :15/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಆಲ್ವಿನ್ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಸುರೇಶ್ | **29.01.2024** |
| ವಯಸ್ಸು | : | 27 ವರ್ಷ | |
| ವೃತ್ತಿ | : | ವ್ಯವಸಾಯ | ಪಿ.ಡಬ್ಲೂ಼ 11 |
| ವಾಸಸ್ಥಳ | : | ಅಂಕುಶರಾಯನಪುರ | ಸಿ.ಡಬ್ಲೂ಼ 9 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಫ್ರಾಸಾ – 7 ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇಲ್ಲ. ಅಂದಾಜು 1 ವರ್ಷದ ಹಿಂದೆ ನಮ್ಮ ಗ್ರಾಮದಲ್ಲಿ ಗಲಾಟೆಯಾದ ವಿಷಯವಾಗಿ ವ್ಯಾಪ್ತಿ ಕವಲಂದೆ ಪೊಲೀಸ್ ಠಾಣೆ ಗೆ ಹೋದಾಗ ನಾನು ಸಹಿ ಮಾಡಿದ್ದೇನೆ. ನನ್ನೊಂದಿಗೆ ಫ್ರಾಸಾ 7 ಸಹ ಸಹಿ ಮಾಡಿದ್ದಾರೆ. ಈಗ ನಾನು ನೋಡುತ್ತಿರುವ ನಿಪಿ. 11 ಪಂಚನಾಮೆಯ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.– 11 (ಬಿ) ಎಂದು ಗುರುತಿಸಲಾಯಿತು. ನಿಪಿ. 11 ರಲ್ಲಿ ಬರೆದ ವಿಷಯಗಳ ಬಗೆ ಮಾಹಿತಿ ಇಲ್ಲ. ನಿಪಿ. 11 ಕ್ಕೆ ಸಹಿ ಮಾಡುವಾಗ ಪೊಲೀಸರು ಯಾವುದೇ ವಾಹನ ಅಥವಾ ವಸ್ತುಗಳನ್ನು ಜಪ್ತು ಮಾಡಿಕೊಂಡಿಲ್ಲ. ಈಗ ನನಗೆ ತೋರಿಸಿದ ಪೋಟೋದಲ್ಲಿ ಕಾಣುವ ಬೈಕ್ ನ್ನು ನಾನು ಆ ದಿನ ನೋಡಿಲ್ಲ. ನಿಪಿ. 11 ಕ್ಕೆ ನಾನು ತಗಡೂರು ಗ್ರಾಮದ ಜವರಶೆಟ್ಟಿ ಜಮೀನಿನ ಪಕ್ಕ ಸಹಿಯನ್ನು ನಿಪಿ. 11 ಕ್ಕೆ ಮಾಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

2. ದಿಃ 20.06.2020 ರಂದು ತಗಡೂರಿನ ಜವರಶೆಟ್ಟಿಯವರ ಜಮೀನಿನ ಪಕ್ಕ ನೀರು ಹರಿಯುವ ಸ್ಥಳದಲ್ಲಿ ಪೊಲೀಸರು ನನ್ನ ಹಾಗೂ ಪ್ರಾಸಾ 7 ರವರ ಸಮಕ್ಷಮ ಆರಕ್ಷಕ ಪೇದೆ 452 ಲೋಕೇಶ್ ರವರು ತೋರಿಸಿದ ಬೈಕ್ ನಂಬರ್ KA09ER1907 ನ್ನು ವಶಕ್ಕೆ ಪಡೆದುಕೊಂಡರು ಎಂದರೆ ಸರಿಯಲ್ಲ. ಆರೋಪಿ ಕೃತ್ಯಕ್ಕೆ ಬಳಸಿದ ವಾಹನವನ್ನು ಘಟನೆಯ ನಂತರ ಅಲ್ಲಿ ಬಚ್ಚಿಟ್ಟಿದ್ದ ಎನ್ನುವ ವಿಷಯ ನನಗೆ ಸ್ಥಳದಲ್ಲಿ ಗೊತ್ತಾಯಿತು ಎಂದರೆ ಸರಿಯಲ್ಲ. ಸ್ಥಳದಲ್ಲಿ ಬರೆದ ನಿಪಿ. 11 ಕ್ಕೆ ಎಲ್ಲಾ ವಿಷಯ ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರಃ ಇಲ್ಲ**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

29.01.2024
(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.